ಉತ್ತರ

ಆ) ಮೊದಲು ಗ್ರಾಮೀಣ ಪ್ರದೇಶದ ಸಂಸ್ಥೆಗಳಲ್ಲಿ ತೆರವಾದ ಹುದ್ದೆಗಳನ್ನು ಭರ್ತಿ ಮಾಡಲು ಕೌನ್ಸಿಲಿಂಗ್‌ನಲ್ಲಿ ಆದ್ಯತೆ ನೀಡಲಾಗುವುದು.

ಆ) ಇಲ್ಲ.

ಬೀದರ್ ಜಿಲ್ಲಾ ಪಂಚಾಯಿತಿ ರಸ್ತೆಗಳ ದುರಸ್ತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1100(1389)

ಸದಸ್ಯರ ಹೆಸರು: ಶ್ರೀ ಗುಂಡಪ್ಪ ವಕೀಲ್(ಬೀದರ್)

ಉತ್ತರಿಸುವ ಸಚಿವರು: ಶ್ರೀ ಎಂ.ವೈ.ಘೋರ್ಪಡೆ(ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು)

ಪ್ರಶ್ನೆ

1. ಬೀದರ್ ತಾಲ್ಲೂಕಿನಲ್ಲಿರುವ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ರಸ್ತೆಗಳೆಷ್ಟು? ಮತ್ತು ಎಷ್ಟು ಕಿಮೀ ಉದ್ದದ ರಸ್ತೆಗಳಿವೆ?

2. ಈ ರಸ್ತೆಗಳ ದುರಸ್ತಿಗಾಗಿ 2000-01, 2001-02ನೇ ಸಾಲುಗಳಲ್ಲಿ ಖರ್ಚು ಮಾಡಿರುವ ಹಾಗೂ ಮಾಡಬಹುದಾದ ಮೊತ್ತ ಎಷ್ಟು?

3. ಸದರಿ ರಸ್ತೆಗಳು ತುಂಬಾ ಕೆಟ್ಟಿದ್ದು ವಾಹನ ಸಂಚಾರಕ್ಕೆ ಅಡ್ಡಿಯುಂಟು ಮಾಡುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

4. 2002-03ರಲ್ಲಿ ಇಂತಹ ರಸ್ತೆಗಳ ದುರಸ್ತಿ ಕಾರ್ಯಕ್ಕೆಗೊಳ್ಳಲು ಸರ್ಕಾರವು ಉದ್ದೇಶಿಸಿವೆಯೇ? ಹಾಗಿದ್ದಲ್ಲಿ ಅಂಥ ರಸ್ತೆಗಳ ವಿವರ ನೀಡುವುದು?

ಉತ್ತರ

1. ಬೀದರ್ ತಾಲ್ಲೂಕಿನಲ್ಲಿರುವ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ 17 ಗ್ರಾಮೀಣ ರಸ್ತೆಗಳು ಮತ್ತು 100 ಟಿಡಿಬಿ ರಸ್ತೆಗಳು ಇರುತ್ತವೆ. ಅವುಗಳ ಉದ್ದ ಕ್ರಮವಾಗಿ 133.80 ಕಿಮೀ ಮತ್ತು 325.70 ಕಿಮೀ ಇದ್ದು ಒಟ್ಟು 459.50 ಕಿಮಿ ಉದ್ದ ಇರುತ್ತವೆ.

2. ಈ ರಸ್ತೆಗಳ ದುರಸ್ತಿಗಾಗಿ 2000-01, 2001-02ನೇ ಸಾಲುಗಳಲ್ಲಿ ಖರ್ಚು

ಮಾಡಿರುವ ಹಾಗೂ ಮಾಡಬಹುದಾದ ಮೊತ್ತದ ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಲಾಗಿದೆ.

3. ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಕೆಲವು ರಸ್ತೆಗಳು ಕೆಟ್ಟಿದ್ದು ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

4. ಉದ್ದೇಶಿಸಿರುತ್ತದೆ. 2002-03ರಲ್ಲಿ ಅನುದಾನ ಆಯವ್ಯಯದ ಆಧಾರದ ಮೇಲೆ ಇಂತಹ ರಸ್ತೆಗಳ ದುರಸ್ತಿ ಮತ್ತು ನಿರ್ವಹಣೆಗಾಗಿ ಕ್ರಿಯಾ ಯೋಜನೆ ತಯಾರಿಸಲಾಗುವುದು. ಈಗಾಗಲೇ ಪ್ರಧಾನ ಮಂತ್ರಿ ಸಡಕ್ ಯೋಜನೆಯಲ್ಲಿ ರೂ. 108.00 ಲಕ್ಷ ಖರ್ಚಿನಲ್ಲಿ ಸುಮಾರು 12 ಕಿಮೀ ಉದ್ದ ರಸ್ತೆ ಸುಧಾರಣೆ ಮಾಡಲು ಯೋಜನಾ ವರದಿಯು ಅನುಮೋದನೆ ಹೊಂದಿರುತ್ತದೆ.

ಅನುಬಂಧ- 1

ಕ್ರಮ ಸಂಖ್ಯೆ	ಲೆಕ್ಕಶೀರ್ಷಿಕೆ	ವರ್ಷ 2000-01 ರಲ್ಲಿ ಖರ್ಚಾದ ಹಣ	ವರ್ಷ 2001-02 ರಲ್ಲಿ ಒದಗಿಸಲಾದ ಅನುದಾನ	ಡಿಸೆಂಬರ್ ಅಂತ್ಯದ ವರೆಗಿನ ಖರ್ಚು	ಇನ್ನೂ ಮಾಡ ಬೇಕಾದ ಖರ್ಚು
1.	5054/ 3054 (ಯೋಜನೆ)	9.92	14.960	11.857	3. 103
2.	3054 (ಯೋಜನೇತರ)	34. 136	0	19.438	0
3.	ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ (ರಸ್ತೆ ಮಾತ್ರ)	6.238	10.762	5.661	5. 101
4.	ಬಿ.ಎ.ಡಿ.ಪಿ. (ರಸ್ತೆ ಮಾತ್ರ)	0	0	1.50	0
5.	ಎಂ.ಪಿ.ಫಂಡ್	0	6.50	3.25	3.25
6.	100 ಲಕ್ಷ ರಸ್ತೆ ಕಾರ್ಯಕ್ರಮ	61. 141	0	0	0
7.	ಇಎಎಸ್ (ರಸ್ತೆಮಾತ್ರ)	5, 57	4. 10	0	0
8.	10ನೇ ಹಣಕಾಸು ಆಯೋಗ ರಸ್ತೆ ಮಾತ್ರ	9.03	0	0	0
	ಒಟ್ಟು	126.035	36. 322	41. 706	11. 454